

# ಶ್ರೀಗಂಧ

## ರಾಜ್ಯೋತ್ಸವ ವಿಶೇಷಾಂಕ

## ನವೆಂಬರ್ ೨೦೦೫





ಕುವೆಂಪು



ದ. ರಾ. ಬೇಂದ್ರೆ



ಶಿವರಾಂ ಕಾರಂತ್



ಮಾಸ್ತಿ ವೆಂಕಟೇಶ ಅಯ್ಯಂಗಾರ್

सत्यमेव जयते



भारतीय राजदूतावास
السفارة الهندية
EMBASSY OF INDIA
P.O. Box 2788, DOHA - QATAR
Tel. : 4672021, Fax : (974) 4670448
E-mail : indembdh@qatar.net.qa
Website : www.indianembassy.gov.qa

24 October 2005

**MESSAGE**

I am extremely happy to know that the Karnataka Sangha is celebrating formation day **(Rajyotsava)** of Karnataka state on 11 November 2005. I take this opportunity to convey my warm felicitations to all members and families of Karnataka Sangha.

Karnataka Sangha has been in the forefront in the cultural functions organised under the auspices of the Indian Cultural Centre. Karnataka Sangha has also been one of the key participants in the Independence Day and Republic Day Functions. The Sangha has not only been working for the benefit of the Kannada speaking people in Qatar, but has also been making significant contribution, along with the Indian community, in socio-cultural fields. There is no doubt that Karnataka Sangha will continue its endeavours in this direction as an important segment of the Indian community in Qatar.

I would like to convey my best wishes to all members, and their families, of Karnataka Sangha in Qatar for all success in future.

[ Rajinder Bhagat ]
**Minister**

# ಸಂಪಾದಕೀಯ....



**ಆತ್ಮೀಯ ಕನ್ನಡ ಬಾಂಧವರೇ,**

**ಬಾರಿಸು ಕನ್ನಡ ಡಿಂಡಿಮವ**
**ಓ ಕರ್ನಾಟಕ ಹೃದಯ ಶಿವ....**

ಸಾಗರದಾಚೆಯ ಸೊಬಗಿನ ಹಾಗು ಬೆಡಗಿನ ನಾಡಾದ ಕತಾರ್‌ನಲ್ಲಿದ್ದುಕೊಂಡೇ, ನಮ್ಮ ಚೆಲುವಿನ ಕನ್ನಡ ನಾಡಿನ ಉದಯದ 50ನೇ ಸಂವತ್ಸರವನ್ನು ನಾವೆಲ್ಲಾ ಇಂದು ಸಂಭ್ರಮದಿಂದ ಆಚರಿಸುತ್ತಿದ್ದೇವೆ.

ಭಾರತದ ಸ್ವಾತಂತ್ರ್ಯಕ್ಕೂ ಪೂರ್ವದಲ್ಲಿ ನಮ್ಮ ಕರುನಾಡು, ಮುಂಬಯಿ ಕರ್ನಾಟಕ, ಹೈದ್ರಾಬಾದ್ ಕರ್ನಾಟಕ, ಮೈಸೂರು ಪ್ರಾಂತ್ಯ, ಹಾಗೂ ಮದ್ರಾಸ್ ಪ್ರಾಂತ್ಯಗಳಲ್ಲಿ ಲೀನವಾಗಿದ್ದರಿಂದ, ಕನ್ನಡ ಭಾಷೆಯ ಭಾಷಿಕರಿಗೆ, ನಮ್ಮ ಹಿರಿಯ ಮುತ್ಸದ್ದಿಗಳು ಕರ್ನಾಟಕ ರಾಜ್ಯದ ಪರಿಕಲ್ಪನೆಯನ್ನು ಮನಗಂಡು, ಸಾಕಷ್ಟು ಶ್ರಮ ವಹಿಸಿ 1956 ನೇ ನವೆಂಬರ್ 1 ರಂದು ಈ ಸುಂದರ ನಾಡನ್ನು ಸಾಕಾರಗೊಳಿಸಿದರು.

ಕರ್ನಾಟಕದ ಹಿರಿಮೆ ಇಂದು–ನಿನ್ನೆಯದಲ್ಲಾ! ಸಾವಿರಾರು ವರ್ಷಗಳ ಗತವೈಭವದ ಇತಿಹಾಸ ಇರುವ ಕನ್ನಡ ಭಾಷೆ ಅತ್ಯಂತ ಶ್ರೀಮಂತ ಹಾಗು ಸಮೃದ್ಧ. ಆದಿ–ಕವಿ ಪಂಪ, ರನ್ನ, ನೃಪತುಂಗ, ಹರಿಹರ, ರಾಘವಾಂಕ, ಪುರಂದರ, ಕುಮಾರವ್ಯಾಸ, ರತ್ನಾಕರ ಹಾಗು ಜನಪದ ಸಾಹಿತ್ಯದಿಂದ ಭಾರತೀಯ ಭಾಷಾಲೋಕದಲ್ಲಿ ತನ್ನದೇ ಆದ ಹಿರಿಮೆಯನ್ನು ಹೊಂದಿದೆ. ಅಷ್ಟೇ ಏಕೆ, ನವೀನಗನ್ನಡದ ಏಳು ಜನ ಕನ್ನಡ ಸಾಹಿತಿಗಳು, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು ಎಂಬುದು ಕೂಡಾ ನಮ್ಮ ದೇಶದಲ್ಲಿಯೇ ಒಂದು ದಾಖಲೆ. ಇಷ್ಟೊಂದು ಶ್ರೀಮಂತ ಭಾಷೆಯ ಕರುಳಿನ ಕುಡಿಗಳಾಗಿರುವುದು ನಮ್ಮೆಲ್ಲರ ಹೆಮ್ಮೆ. ಈ ಹೆಮ್ಮೆಯನ್ನು ನಮ್ಮ ಮುಂದಿನ ಪೀಳಿಗೆಗೂ ಬಳುವಳಿಯಾಗಿ ಕೊಡುವುದರ ದ್ಯೋತಕವಾಗಿ ನಾವೆಲ್ಲಾ ಸೇರಿ ಈ ಸುದಿನದ ಸವಿಯನ್ನು ಸವಿಯೋಣ.

ಪಂಪ ಮಹಾಕವಿಯ "ಆರಂಕುಶಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಂ" ಎಂಬ ಉಕ್ತಿಯಂತೆ, ಸಾವಿರಾರು ಮೈಲುಗಳಾಚೆ ಕನ್ನಡಮ್ಮನಿಂದ ದೂರವಿದ್ದರೂ, ಕರ್ನಾಟಕ ಸಂಘ ಕತಾರ್‌ನ ಕರ್ನಾಟಕ ರಾಜ್ಯೋತ್ಸವದಲ್ಲಿ ನಾವೆಲ್ಲಾ ಪಾಲ್ಗೊಂಡು, ಕನ್ನಡದ ಬಗ್ಗೆ ನಮ್ಮ ಅಭಿಮಾನವನ್ನು ಮೆರೆಯೋಣ.

ಐ.ಟಿ (ಇನ್ಫಾರ್ಮೇಶನ್ ಟೆಕ್ನಾಲಜಿ) ಹಾಗು ಬಿ.ಟಿ. (ಬಯೋ ಟೆಕ್ನಾಲಜಿ) ಜಾಗತೀಕರಣದ ಮುಂಚೂಣಿಯ ಕೇಂದ್ರ ಸ್ಥಾನವಾಗಿರುವ ನಮ್ಮ ಕರ್ನಾಟಕ, ಕನ್ನಡದ ಕಂಪನ್ನು ಕಳೆದು ಕೊಳ್ಳದೇ ಜಾಗತಿಕ ಮಟ್ಟದಲ್ಲೂ ವಿಜೃಂಭಿಸಲಿ ಎಂಬ ಆಶಾಭಾವನೆಯೊಂದಿಗೆ, ರಾಜ್ಯೋತ್ಸವವನ್ನು ನಾವು ಕತಾರ್‌ನಲ್ಲಿಯೂ ಆಚರಿಸಿ ಕನ್ನಡದೆಡೆಗಿನ ನಮ್ಮ ಅಳಿಲು ಸ್ವಾಭಿಮಾನವನ್ನು ತೋರೋಣ.

**ಜೈ ಭಾರತ ಜನನಿಯ ತನುಜಾತೆ**
**ಜಯ ಹೇ ಕರ್ನಾಟಕ ಮಾತೆ.**

**ಇಂತಿ ನಮನಗಳೊಂದಿಗೆ**
**ಶಾಲಿನಿ ಎಸ್. ಆಲೂರ್, ಸಂಪಾದಕರು**

ಸಂಚಿಕೆಯ ಬಗ್ಗೆ. . .

ಕರ್ನಾಟಕ ರಾಜ್ಯೋತ್ಸವದ ಸುವರ್ಣ ಮಹೋತ್ಸವದ ಸುಸಂದರ್ಭದಲ್ಲಿ ಈ ಸಂಚಿಕೆಯನ್ನು ಸಾಕಾರಗೊಳಿಸಲು ಸಾಕಷ್ಟು ಸದಸ್ಯರು ತನು, ಮನ ಹಾಗು ಧನದಿಂದ ಸಹಾಯ ಮಾಡಿದ್ದಾರೆ.

ಮೊದಲಿನಿಂದ ಕೊನೆಯವರೆಗೆ ಸಂಚಿಕೆಯ ಎಲ್ಲಾ ಕಾರ್ಯಗಳಲ್ಲಿ ಸಹಕಾರ ನೀಡಿದ ಶ್ರೀ ಹೆಚ್.ಕೆ. ಮಧು ಇವರಿಗೆ ನಮ್ಮ ವಿಶೇಷ ಧನ್ಯವಾದಗಳು. ಸಂಚಿಕೆಯ ಪ್ರಕಟಣೆಯ ಸಲುವಾಗಿ ಜಾಹೀರಾತುದಾರರ ಮಹಾಪೂರವನ್ನೇ ಹರಿಸಿದ ಶ್ರೀ ವಿ. ಎಸ್. ಮನ್ನಂಗಿ, ಶ್ರೀ ಚಂದ್ರಶೇಖರ್ ಮಣಕ್‌ವಾಡ್, ಶ್ರೀ ಸಂತೋಷ್ ಕುಲಕರ್ಣಿ, ಹಾಗೂ ಸಹಾಯ ಸಲ್ಲಿಸಿದ ಸದಸ್ಯರುಗಳಿಗೆ ಮತ್ತು ಜಾಹೀರಾತು ನೀಡಿದ ಸಂಸ್ಥೆಗಳಿಗೆ ನಮ್ಮ ಅನಂತಾನಂತ ಧನ್ಯವಾದಗಳು. ತಮ್ಮ ಸಲಹೆ ಸೂಚನೆಗಳ ಮೂಲಕ ಸಂಚಿಕೆಗೆ ಮೆರಗು ನೀಡಿದ ಶ್ರೀ ಪ್ರಭಾಕರ್ ಮತ್ತು ಶ್ರೀಮತಿ ಸುಧಾ, ಶ್ರೀ ಜೆ.ಜೆ. ಪಾಲ್, ಶ್ರೀ ಎನ್. ಶಾಮ ಸುಂದರ್, ಶ್ರೀ ಎಸ್.ಎಸ್.ಆಲೂರ್ ಇವರುಗಳಿಗೂ ನಾವು ಆಭಾರಿಗಳು.

ಸಂಚಿಕೆಯಲ್ಲಿ ಪ್ರಕಟಿಸಲು ಲೇಖನಗಳು, ಬರಹಗಳು, ಕವನಗಳು ಮಹಾಪೂರವಾಗಿ ಬಂದಿವೆ. ಸ್ಥಳಾಭಾವದಿಂದ ಈ ಸಂಚಿಕೆಯಲ್ಲಿ ಎಲ್ಲವನ್ನು ಮುದ್ರಿಸಲು ಸಾಧ್ಯವಾಗಿಲ್ಲ. ಮುಂದಿನ ಸಂಚಿಕೆಯಲ್ಲಿ ಉಳಿದವುಗಳನ್ನು ಮುದ್ರಿಸುತ್ತೇವೆ.

ಸಂಚಿಕೆಯ ಬಗೆಗಿನ ತಮ್ಮ ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ.



# ಅಧ್ಯಕ್ಷರ ಪ್ರಸ್ತಾಪನೆ

**ಆತ್ಮೀಯ ಸ್ನೇಹಿತ ಬಂಧುಗಳೆ,**

ನಮ್ಮ ರಾಜ್ಯೋತ್ಸವದ ಸುವರ್ಣ ವರ್ಷದಲ್ಲಿ ಇಡೀ ವಿಶ್ವದೆಲ್ಲೆಡೆ ನೆಲೆಸಿರುವ ಕನ್ನಡನಾಡಿನ ಜನತೆಗೆ ನನ್ನ ಹೃತ್ಪೂರ್ವಕ ಶುಭಾಶಯಗಳು ಹಾಗು ಅಭಿನಂದನೆಗಳು. ಅರ್ಧ ಶತಮಾನ ಕಡಿಮೆ ಅವಧಿಯಲ್ಲ. ಹರಿದು ಹಂಚಿ ಹೋಗಿದ್ದ ಕನ್ನಡ ನಾಡಿನ ಪ್ರದೇಶಗಳನ್ನು ಒಂದಾಗಿ ಸೇರಿಸಿ ರಾಜ್ಯ ಸ್ಥಾಪನೆಗೆ ಅನುವು ಮಾಡಿದ ಎಲ್ಲ ಹಿರಿಯ ಚೇತನಗಳಿಗೆ ನಮನಗಳು. ಕರ್ನಾಟಕ ರಾಜ್ಯ ಹಾಗೂ ಕನ್ನಡ ಜನತೆ ಇಂದು ವಿಶ್ವದಾದ್ಯಂತ ಹೆಮ್ಮೆಯಿಂದ ಗುರುತಿಸಿಕೊಳ್ಳುವ ಸದಾವಕಾಶವುಂಟಾಗಿದೆ.

ಇಲ್ಲಿನ ನಮ್ಮ ಸಂಘ ದಿನದಿಂದ ದಿನಕ್ಕೆ ಬೆಳೆಯುತ್ತ ಬಂದಿದೆ. ಇಲ್ಲಿರುವ ನಮ್ಮ ನಾಡಿನ ಎಲ್ಲರೂ ಸಂಘದ ವೇದಿಕೆಯಡಿ ಬಂದು ತಮ್ಮ ಅಪಾರ ಅನುಭವ ಮತ್ತು ಪ್ರತಿಭೆಗಳನ್ನು ಅಭಿವ್ಯಕ್ತಗೊಳಿಸುವ ಸುಸಂಧರ್ಭದಲ್ಲಿ, ಸಂಘ ಸ್ಥಾಪನೆಯ ನಿಜವಾದ ಉದ್ದೇಶ ಈಡೇರೀತು. ಇಂತಹ ಒಂದು ಮಹತ್ತರವಾದ ಆಶಯಕ್ಕೆ, ನನ್ನೊಂದಿಗೆ ನಮ್ಮ ಕಾರ್ಯಕಾರಿ ಸಮಿತಿಯ ಸದಸ್ಯರುಗಳು, ಸ್ನೇಹಿತರು ಮತ್ತು ಇತರೆ ಸಂಘದ ಹಿತೈಷಿಗಳು ಕೈಜೋಡಿಸಿದ್ದಾರೆ. ಅವರಿಗೆಲ್ಲಾ ನನ್ನ ವಂದನೆಗಳು.

ಇನ್ನೊಂದು ವಿಚಾರವನ್ನು ನಿಮ್ಮೊಂದಿಗೆ ಪ್ರಸ್ತಾಪಿಸಬೇಕೆಂದಿರುವೆ. ನಮ್ಮ ಇಂದಿನ ಸಾಮಾಜಿಕ ಸ್ಥಿತಿ–ಗತಿ, ಆರ್ಥಿಕ ಪರಿಸ್ಥಿತಿ ಒಂದು ಹಂತವನ್ನೇರಿದ ಮಟ್ಟ ಮುಟ್ಟಿದೆ. ಸಾಮಾಜಿಕ ಕಳಕಳಿಯನ್ನು ಮೈಗೂಡಿಸಿಕೊಂಡು, ನಮಗಿಂತ ಅತ್ಯಂತ ಕೆಳಮಟ್ಟದಲ್ಲಿರುವವರ ಬಗ್ಗೆ ಸಹಾನುಭೂತಿ, ಅನುಕಂಪ, ಉದಾರತೆ ವ್ಯಕ್ತಪಡಿಸುವ ಅವಶ್ಯಕತೆ ಇದೆಯೆನ್ನಿಸುವುದಿಲ್ಲವೇ? ಅವರುಗಳಿಗೆ ನಮ್ಮ ಸಹಾಯ ಹಸ್ತ ಚಾಚುವ ಮನಸ್ಸಾಗುವುದಿಲ್ಲವೇ? ಹನಿ–ಹನಿ ಗೂಡಿದರೆ ಹಳ್ಳ, ಒಗ್ಗಟ್ಟಿನಲ್ಲಿ ಬಲವಿದೆ ಎಂಬ ನಾಣ್ಣುಡಿಗಳಂತೆ, ಸಂಘಟಿತವಾಗಿ ನಾವು ಈ ಬಗ್ಗೆ ಒಂದೆಡೆ ಕಲೆತು, ಚರ್ಚಿಸಿ, ಕಾರ್ಯ ರೂಪಿಸಿ, ಸಾಧಿಸುವ ದಿಕ್ಕಿನಲ್ಲಿ ಹೆಜ್ಜೆಯನ್ನು ಹಾಕೋಣ. ಈ ನನ್ನ ಹಂಬಲಕ್ಕೆ ನೀವೆಲ್ಲಾ ಬೆಂಬಲವಾಗಿ ನಿಲ್ಲುವಿರಿ ಎಂಬ ಆಶಯದೊಂದಿಗೆ, ಮತ್ತೊಮ್ಮೆ ಶುಭಾಶಯಗಳನ್ನು ಕೋರುತ್ತಾ ನನ್ನ ಪ್ರಸ್ತಾಪನೆಯನ್ನು ಮುಗಿಸುತ್ತಿರುವೆ.

ಸರ್ವರಿಗೂ ಒಳ್ಳೆಯದಾಗಲಿ.

**ಕೆ. ಪ್ರಭಾಕರ.**
ಅಧ್ಯಕ್ಷರು



## ಸಂದೇಶ

ಪ್ರಿಯ ಬಾಂಧವರೇ,

ಪ್ರಗತಿ, ಕರ್ನಾಟಕ ಸಂಘದ ಪರವಾಗಿ 'ಶ್ರೀಗಂಧದ' ಕರ್ನಾಟಕ ರಾಜ್ಯೋತ್ಸವದ ಈ ಸಂಚಿಕೆಯ ಬಿಡುಗಡೆಗಾಗಿ ತಮ್ಮೆಲ್ಲರಿಗೂ ಅಭಿನಂದನೆಗಳು.

ಈವರೆಗೂ ನಡೆದ ಎಲ್ಲಾ ಕಾರ್ಯಕ್ರಮಗಳು ನಮ್ಮೆಲ್ಲರಿಗೂ ಬಹಳ ಸಂತಸ ತಂದಿವೆ. ಕಳೆದ ಫೆಬ್ರವರಿ ತಿಂಗಳಲ್ಲಿ ನಡೆದ ಆಹಾರೋತ್ಸವ, ಮೇ ತಿಂಗಳಲ್ಲಿ ನಡೆದ ಯುಗಾದಿ ,ಹಬ್ಬದ ಆಚರಣೆಯ ಕಾರ್ಯಕ್ರಮಗಳು ಎಲ್ಲರ ಮನಸ್ಸು ಸೆಳೆದು, ಉತ್ಸಾಹವನ್ನು ನೀಡಿವೆ.

ನಿಮ್ಮಲ್ಲಿ ಯಾವುದೇ ರಚನಾತ್ಮಕ, ಕಲಾತ್ಮಕ ಕಲ್ಪನೆಗಳು ಇದ್ದಲ್ಲಿ ಖಂಡಿತ ಮುಂದೆ ಬಂದು ತಿಳಿಸಿ. ಅವುಗಳನ್ನು ನಾವು ಸ್ವಾಗತಿಸಿ ಅಳವಡಿಸಿಕೊಳ್ಳಲು ಪ್ರಯತ್ನಿಸೋಣ. ಇದಕ್ಕಾಗಿ ಎಲ್ಲರ ಸಹಕಾರ, ಪ್ರೋತ್ಸಾಹ, ನಿಃಸ್ವಾರ್ಥ ಮನೋಭಾವ ಇರಬೇಕು. ನಾವು ಸಾಧಿಸಬೇಕಾದುದು ಇನ್ನೂ ಸಾಕಷ್ಟು ಇದೆ. ಅದು ನಿಮ್ಮೆಲ್ಲರ ಬೆಂಬಲವಿಲ್ಲದೆ ಗಳಿಸಲು ಸಾಧ್ಯವಿಲ್ಲ. ಶಾಂತಿಯಿಂದ ನಮ್ಮ ಕರ್ತವ್ಯವನ್ನು ಮಾಡೋಣ. ನಾವೆಲ್ಲರೂ ಒಂದೇ ರಾಜ್ಯದ ಬೇರೆ ಪ್ರಾಂತದವರಾದರೂ ಕನ್ನಡಿಗರು ಎಂಬುದನ್ನು ಮರೆಯಬಾರದು. ನಮ್ಮ ಭಾವನೆಗಳು ಒಂದಾಗಿರಬೇಕು.

ಪ್ರಗತಿಯ ಮಹಿಳೆಯರ ಪರವಾಗಿ ಎಲ್ಲರಿಗೂ ಶುಭವನ್ನು ಹಾರೈಸುತ್ತೇನೆ. ಕರ್ನಾಟಕ ಸಂಘದ ಎಲ್ಲ ಸದಸ್ಯರಿಗೂ ಪ್ರಗತಿಗೆ ನೀಡುತ್ತಿರುವ ಪ್ರೋತ್ಸಾಹಕ್ಕಾಗಿ ನನ್ನ ಹೃತ್ಪೂರ್ವಕ ವಂದನೆಗಳು.

ತಮ್ಮ ವಿಶ್ವಾಸಿ

ಸುಧಾ ಪ್ರಭಾಕರ
ಪ್ರಗತಿಯ ಅಧ್ಯಕ್ಷೆ

# ಕರ್ನಾಟಕ ಸಂಘದ ಆಡಳಿತ ಮಂಡಳಿ 2005–2006




**ಕೆ. ಪ್ರಭಾಕರ್**
ಅಧ್ಯಕ್ಷರು



**ಅರವಿಂದ ಪಾಟೀಲ್**
ಉಪಾಧ್ಯಕ್ಷರು



**ಶಾಮ ಸುಂದರ್**
ಕಾರ್ಯದರ್ಶಿ



**ಪಾಲ್ ಜೆ.ಜೆ.**
ಸಹ ಕಾರ್ಯದರ್ಶಿ



**ನಾಗೇಶ್ ರಾವ್**
ಖಜಾಂಚಿ



**ಅರುಣ್ ಕುಮಾರ್**
ಸಾಂಸ್ಕೃತಿಕ ಕಾರ್ಯದರ್ಶಿ



**ವೆಂಕಟೇಶ ಮೂರ್ತಿ**
ಸಹ ಸಾಂಸ್ಕೃತಿಕ ಕಾರ್ಯದರ್ಶಿ



**ಸಂಜಯ ಕುದರಿ**
ಕ್ರೀಡಾ ಕಾರ್ಯದರ್ಶಿ



**ದಿನೇಶ್ ಗೌಡ**
ಸಹ ಕ್ರೀಡಾ ಕಾರ್ಯದರ್ಶಿ



**ಮಧು ಹೆಚ್.ಕೆ.**
ಪಿ.ಆರ್.ಓ.



**ಸಂತೋಷ್ ಕುಲಕರ್ಣಿ**
ಪ್ರಾಯೋಜಕ ಕಾರ್ಯದರ್ಶಿ




**ಶ್ಯಾಮ್ ಎನ್. ಸ್ವಾಮಿ**
ತೇಜಸ್ ಸಂಯೋಜಕರು



ಆಲೂರ್ ಎಸ್. ಎಸ್.
ಪ್ರಗತಿ ಸಂಯೋಜಕರು



ಶಾಲಿನಿ ಎಸ್. ಆಲೂರ್
ಸಂಪಾದಕರು



ಡಾ। ಪ್ರಮೋದ್
ಸಹ ಸಂಪಾದಕರು

## ಸಲಹಾ ಸಮಿತಿ



ಪ್ರಕಾಶ್ ಬಾಬು



ಎ.ಎನ್.ನಾಗರಾಜ



ಅಂಬಾ ಪ್ರಸಾದ



ಇಕ್ಬಾಲ್ ಮನ್ನಾ

## ಕಾರ್ಯಕಾರಿ ಸಮಿತಿ ಸದಸ್ಯರು



ಗೋಪಾಲ ಎ. ಎಮ್



ರವಿಕಿರಣ




ಕೆ. ನಾಗರಾಜ

## ಕಾರ್ಯಕಾರಿ ಸಮಿತಿ ಸಹ ಸದಸ್ಯರು



ಎ. ಸೂರ್ಯನಾರಾಯಣ



ಟಿ.ಕೆ.ಸುರೇಶ್

# ಪ್ರಗತಿ ಆಡಳಿತ ಮಂಡಳಿ 2005 – 2006



ಸುಧಾ ಪ್ರಭಾಕರ್
ಅಧ್ಯಕ್ಷರು



ನಿರ್ಮಲಾ ರಘುರಾಮನ್
ಕಾರ್ಯದರ್ಶಿ



ವೀಣಾ ಎಸ್.ಕುಲಕರ್ಣಿ
ಸಾಂಸ್ಕೃತಿಕ 'ಕಾರ್ಯದರ್ಶಿ



ಲತಾ ಪ್ರಭು
ಖಜಾಂಚಿ




ರೂಪಾ ಪ್ರಮೋದ್
ಕ್ರೀಡಾ ಕಾರ್ಯದರ್ಶಿ

## ಸಲಹಾ ಸಮಿತಿ



ವಿಮಲಾ ಪ್ರಕಾಶಬಾಬು



ಭುವನಾ ನಾಗರಾಜ